ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक–संस्कृत–विश्वविद्यालयः

श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, वेङ्गलूरु – ५६००१८.


ಸಂಖ್ಯೆ: ಕಸಂವಿ/ಪರೀಕ್ಷಾಂಗ/ಸಂ.ಸ್ನಾ ಹಾಗೂ ಸ್ನಾ.ಪ-೦೨/2024-25 ದಿನಾಂಕ: 25.04.2025

# ಅಧಿಸೂಚನೆ

ವಿಷಯ : 2024-25 ನೇ ಸಾಲಿನ ಸ್ನಾತಕ ಹಾಗೂ ಸ್ನಾತಕೋತ್ತರ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ಕುರಿತು –

ಉಲ್ಲೇಖ : ಮಾನ್ಯ ಕುಲಪತಿಗಳ ಅನುಮೋದನೆ ಕಂಡಿಕೆ ಸಂಖ್ಯೆ : 53 ; ದಿನಾಂಕ : 19.04.2025.

2024-25 ನೇ ಸಾಲಿನ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಪರಿಸರದ ಹಾಗೂ ಮಾನ್ಯತೆಗೊಳಪಟ್ಟ ಕಾಲೇಜುಗಳ ವೇದ ಹಾಗೂ ಶಾಸ್ತ್ರ ವಿಭಾಗಗಳ ಸ್ನಾತಕ ದ್ವಿತೀಯ, ಚತುರ್ಥ, ಷಷ್ಠ ಹಾಗೂ ಸ್ನಾತಕೋತ್ತರ ದ್ವಿತೀಯ, ಚತುರ್ಥ ಷಾಣ್ಮಾಸಿಕ ತರಗತಿಗಳ Freshers ಹಾಗೂ Repeaters ಅರ್ಹ ವಿದ್ಯಾರ್ಥಿಗಳಿಂದ ಹಾಗೂ ಸ್ನಾತಕ ವಾರ್ಷಿಕ ಸ್ಕೀಮ್ ನಲ್ಲಿರುವ ಪ್ರಥಮ, ದ್ವಿತೀಯ ಹಾಗೂ ತೃತೀಯ ವರ್ಷದ ಪುನರಾವರ್ತಿತ ವಿದ್ಯಾರ್ಥಿಗಳಿಂದ ಪರೀಕ್ಷಾ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ.ಮಂ. | ವಿವರಗಳು | ಅಂತಿಮ ದಿನಾಂಕ |
|---|---|---|
| 1 | ವಿದ್ಯಾರ್ಥಿಗಳು "uucms.karnataka.gov.in" ಮುಖಾಂತರ ಪ್ರವೇಶ ಮಾಡಿ ವಿದ್ಯಾರ್ಥಿಗಳ ಲಾಗಿನ್ ಐ.ಡಿ.ಯಲ್ಲಿ ಪರೀಕ್ಷಾ ಅರ್ಜಿಗಳನ್ನು ತುಂಬಲು & ಪರೀಕ್ಷಾ ಶುಲ್ಕಗಳನ್ನು ಆನ್‌ಲೈನ್ ಮುಖಾಂತರ ದಂಡ ರಹಿತವಾಗಿ ಪಾವತಿಸಲು ದಿನಾಂಕ : | 28.04.2025 ರಿಂದ 15.05.2025 |
| 2 | ದಂಡ ಶುಲ್ಕ ರೂ.100 ರೊಂದಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ (with 1st penalty-Rs. 100/-) | 16.05.2025 |
| 3 | ದಂಡ ಶುಲ್ಕ ರೂ.200 ರೊಂದಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ (with 2nd penalty-Rs. 200/-) | 17.05.2025 |
| 4 | IA (Internal Assessment) ಆಂತರಿಕ ಅಂಕಗಳನ್ನು uucms ಮೂಲಕ ನಮೂದಿಸಲು ಅಂತಿಮ ದಿನಾಂಕ : | 28.04.2025 ರಿಂದ 31.05.2025 |
| 5 | ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸಿದ ಮಾಹಿತಿಯನ್ನು ಸಂಬಂಧಪಟ್ಟ ಕಾಲೇಜಿಗೆ/ಅಧ್ಯಯನಾಂಗಕ್ಕೆ ಸಲ್ಲಿಸಲು ಕೊನೆಯ ದಿನಾಂಕ : | 19.05.2025 |
| 6 | ಪ್ರಾಂಶುಪಾಲರು/ಅಧ್ಯಯನಾಂಗವು ವಿದ್ಯಾರ್ಥಿಗಳು ಪಾವತಿಸಿರುವ ಪರೀಕ್ಷಾ ಶುಲ್ಕಗಳ ಮಾಹಿತಿಯನ್ನು ಅನುಬಂಧ-೧ ಮತ್ತು ೨ ರಲ್ಲಿ ಕ್ರೋಢೀಕರಿಸಿ examksu2016@gmail.com ಗೆ ಸಲ್ಲಿಸಲು ಕೊನೆಯ ದಿನಾಂಕ: | 22.05.2025 |
| 7 | ಸಂಬಂಧಪಟ್ಟ ಕಾಲೇಜಿನವರು ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾದ ದಿನಾಂಕ : | 06.06.25 ರಿಂದ 10.06.2025 |
| 8 | ಪ್ರಾಯೋಗಿಕ ಪರೀಕ್ಷೆಗಳು ಆರಂಭವಾಗುವ ದಿನಾಂಕ | 12.06.2025 |
| 9 | ಲಿಖಿತ ಪರೀಕ್ಷೆಗಳು ಪ್ರಾರಂಭವಾಗುವ ದಿನಾಂಕ : | 23.06.2025 |

**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक-संस्कृत-विश्वविद्यालयः**
श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.

## ಪರೀಕ್ಷಾ ಶುಲ್ಕಗಳ ವಿವರ

| ಕ್ರ. ಸಂ. | ಪರೀಕ್ಷೆಗಳ ವಿವರ | ಪರೀಕ್ಷಾ ಶುಲ್ಕ OBC & General | ವಿನಾಯಿತಿ ಶುಲ್ಕ* SC-ST/CAT-1 |
|---|---|---|---|
| 1. | ಸಂಸ್ಕೃತ/ವೇದ ಸ್ನಾತಕ 2 ನೇ ಸೆಮಿಸ್ಟರ್ | 400/- | 200/- |
| 2. | ಸಂಸ್ಕೃತ/ವೇದ ಸ್ನಾತಕ 4 ನೇ ಸೆಮಿಸ್ಟರ್ | 450/- | 225/- |
| 3. | ಸಂಸ್ಕೃತ/ವೇದ ಸ್ನಾತಕ 6 ನೇ ಸೆಮಿಸ್ಟರ್ | 500/- | 250/- |
| 3. | ಸಂಸ್ಕೃತ/ವೇದ ಸ್ನಾತಕೋತ್ತರ 2ನೇ ಮತ್ತು 4ನೇ ಸೆಮಿಸ್ಟರ್ | 700/- | 350/- |
| 4. | ಸ್ನಾತಕ ಮತ್ತು ಸ್ನಾತಕೋತ್ತರ – ಪ್ರಥಮ ದಂಡಶುಲ್ಕದೊಂದಿಗೆ* | Exam Fee +100.00 | |
| 5. | ಸ್ನಾತಕ ಮತ್ತು ಸ್ನಾತಕೋತ್ತರ – ದ್ವಿತೀಯ ದಂಡಶುಲ್ಕದೊಂದಿಗೆ* | Exam Fee +200.00 | |
| 6. | ಪುನರಾವರ್ತಿತ – ಸ್ನಾತಕ 2,4,6 ನೇ ಸೆಮಿಸ್ಟರ್ ಹಾಗೂ ಪ್ರಥಮ , ದ್ವಿತೀಯ ಮತ್ತು ತೃತೀಯ ವರ್ಷ | ಒಂದು ಪತ್ರಿಕೆಗೆ – ರೂ.200.00 | |
| 7. | ಪುನರಾವರ್ತಿತ – ಸ್ನಾತಕ 2 ನೇ ಸೆಮಿಸ್ಟರ್ ಹಾಗೂ ಪ್ರಥಮ ವರ್ಷ | ಒಂದಕ್ಕಿಂತ ಹೆಚ್ಚು ಪತ್ರಿಕೆ ಇದ್ದಲ್ಲಿ – ರೂ 400.00 | |
| 8. | ಪುನರಾವರ್ತಿತ – ಸ್ನಾತಕ 4 ನೇ ಸೆಮಿಸ್ಟರ್ ಹಾಗೂ ದ್ವಿತೀಯ ವರ್ಷ | ಒಂದಕ್ಕಿಂತ ಹೆಚ್ಚು ಪತ್ರಿಕೆ ಇದ್ದಲ್ಲಿ – ರೂ 450.00 | |
| 9. | ಪುನರಾವರ್ತಿತ – ಬಿ.ಎ-ಶಾಸ್ತ್ರಿ 6 ನೇ ಸೆಮಿಸ್ಟರ್ ಹಾಗೂ ತೃತೀಯ ವರ್ಷ | ಒಂದಕ್ಕಿಂತ ಹೆಚ್ಚು ಪತ್ರಿಕೆ ಇದ್ದಲ್ಲಿ – ರೂ 500.00 | |
| 10. | ಪುನರಾವರ್ತಿತ* – ಸ್ನಾತಕೋತ್ತರ 2 ಮತ್ತು 4 ನೇ ಸೆಮಿಸ್ಟರ್ | ಒಂದು ಪತ್ರಿಕೆಗೆ – ರೂ. 200.00<br>ಒಂದಕ್ಕಿಂತ ಹೆಚ್ಚು ಪತ್ರಿಕೆ ಇದ್ದಲ್ಲಿ – ರೂ.700.00 | |

* ದಂಡಶುಲ್ಕದಲ್ಲಿ ಹಾಗೂ ಪುನರಾವರ್ತಿತರ ಶುಲ್ಕದಲ್ಲಿ ಯಾವುದೇ ವಿನಾಯಿತಿಯಿರುವುದಿಲ್ಲ.

1. ಸರ್ಕಾರದ ಆದೇಶ ಸಂಖ್ಯೆ:- "ಇಡಿ ೨೯೫ ಯುಎನ್‌ಇ ೨೦೧೮, ದಿನಾಂಕ :- ೨೩/೦೧/೨೦೧೯ ರಂತೆ" ಹಾಗೂ ದಿ :-೧೩/೦೩/೨೦೧೯ ರಂದು ನಡೆದ ಪ್ರಶಾಸನ ಸಮಿತಿಯ ಸಭೆಯ ೫೧ನೇ ನಿರ್ಣಯದಂತೆ ಪರಿಶಿಷ್ಟ ಜಾತಿ,

ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ-೧ರ ವಿದ್ಯಾರ್ಥಿಗಳಿಗೆ ಒಟ್ಟು ಪರೀಕ್ಷಾ ಶುಲ್ಕದಲ್ಲಿ ಶೇ ೫೦ ರಷ್ಟು ವಿನಾಯಿತಿಯನ್ನು ನೀಡಲಾಗಿದೆ. ವಿನಾಯಿತಿ ಪಡೆಯುವ ವಿದ್ಯಾರ್ಥಿಗಳು ತಹಶೀಲ್ದಾರ್‌ರವರಿಂದ ಪಡೆದ ಜಾತಿ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿಯನ್ನು ದೃಢೀಕರಿಸಿ ಸಲ್ಲಿಸುವುದು. ಜಾತಿ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿಯನ್ನು ಸಲ್ಲಿಸದಿದ್ದಲ್ಲಿ ಅಂತಹ ಅರ್ಜಿಯನ್ನು ತಿರಸ್ಕರಿಸಲಾಗುವುದು.

2. ಒಂದು ವೇಳೆ ಪೋಷಕರ ವಾರ್ಷಿಕ ಆದಾಯ ರೂ.2,50,000/-(ಎರಡು ಲಕ್ಷದ ಐವತ್ತು ಸಾವಿರ ರೂ.ಗಳು) ಮೀರಿದ್ದಲ್ಲಿ (ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ-೧) ಅಂತಹ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕವನ್ನು ಭರಿಸುವುದು.
3. 2021-22 ನೇ ಸಾಲಿಗಿಂತಲೂ ಹಿಂದಿನ ಸಾಲಿನಲ್ಲಿ ಪ್ರವೇಶ ಪಡೆದ ಎಂ.ಎ ವಿದ್ಯಾರ್ಥಿಗಳಿಗೆ ಹಾಗೂ 2019-20ನೇ ಸಾಲಿಗಿಂತಲೂ ಹಿಂದಿನ ಸಾಲಿನಲ್ಲಿ ಪ್ರವೇಶ ಪಡೆದ ಬಿ.ಎ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶವಿರುವುದಿಲ್ಲ.
4. ಪರೀಕ್ಷಾ ಶುಲ್ಕವನ್ನು ಯಾವ ಕಾರಣದಿಂದಲೂ ಮರುಪಾವತಿ ಮಾಡಲಾಗುವುದಿಲ್ಲ ಮತ್ತು ಅದನ್ನು ಮುಂದಿನ ಪರೀಕ್ಷೆಗಳಿಗೂ ಸರಿದೂಗಿಸಿಕೊಳ್ಳಲಾಗುವುದಿಲ್ಲ.
5. UUCMS ಮೂಲಕ ಪ್ರವೇಶ ಪಡೆದ ವಿದ್ಯಾರ್ಥಿಗಳು "uucms.karnataka.gov.in" ಮುಖಾಂತರವೇ ವಿದ್ಯಾರ್ಥಿಗಳ ಪೋರ್ಟಲ್‌ನಲ್ಲಿ ಪರೀಕ್ಷಾ ಶುಲ್ಕಗಳನ್ನು ಪಾವತಿಸಬೇಕು, ಬೇರೆ ಯಾವುದೇ ಮಾಧ್ಯಮದಲ್ಲಿ ಅಂದರೆ DD ಅಥವಾ SBI Payement Gateway ಇತ್ಯಾದಿ ಮಾಧ್ಯಮದಲ್ಲಿ ಪಾವತಿಸಿದಲ್ಲಿ ಮಾನ್ಯ ಮಾಡಲಾಗುವುದಿಲ್ಲ ಹಾಗೂ ಪುನಃ ಹಿಂದಿರುಗಿಸಲಾಗುವುದಿಲ್ಲ.
6. Non UUCMS ನ ಪುನರಾವರ್ತಿತ ವಿದ್ಯಾರ್ಥಿಗಳು SBI Payement Gateway ಮೂಲಕವೇ ಶುಲ್ಕ ಪಾವತಿಸಬೇಕು ಹಾಗೂ ನಿಗದಿತ ಸಮಯದೊಳಗೆ ವಿದ್ಯಾರ್ಥಿಗಳ ಮಾಹಿತಿಯು ಪ್ರಾಂಶುಪಾಲರ ಮೂಲಕ ಪರೀಕ್ಷಾಂಗಕ್ಕೆ ಸಲ್ಲಿಕೆಯಾಗಬೇಕು. ಅರ್ಜಿಯ ಮಾದರಿಯನ್ನು ಕಸಂವಿ ಜಾಲತಾಣದಿಂದ ksu.ac.in ಪಡೆಯಬಹುದಾಗಿದೆ.
7. ಪ್ರತಿಯೊಬ್ಬ ವಿದ್ಯಾರ್ಥಿಯೂ ಪರೀಕ್ಷಾ ಶುಲ್ಕ ಪಾವತಿಸಿದ ಮಾಹಿತಿಯನ್ನು ನಿಗದಿಪಡಿಸಿದ ಅಂತಿಮ ದಿನಾಂಕದೊಳಗೆ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರಿಗೆ/ವಿಭಾಗಾಧ್ಯಕ್ಷರಿಗೆ ಸಲ್ಲಿಸಬೇಕು.

ಪ್ರಾಂಶುಪಾಲರು/ವಿಭಾಗಾಧ್ಯಕ್ಷರು/ಅಧ್ಯಯನಾಂಗ ಅನುಸರಿಸಬೇಕಾದ ವಿಧಾನಗಳು:

1. ಯಾವುದೇ ಅನುದಾನಿತ/ಅನುದಾನರಹಿತ ಸಂಸ್ಕೃತ ಪಾಠಶಾಲೆ / ಕಾಲೇಜಿನಲ್ಲಿ ಖಾಯಂ ಆಗಿ ಉದ್ಯೋಗದಲ್ಲಿರುವವರು / ಕಸಂವಿ ಪ್ರಶಾಸನ ಹಾಗೂ ಪ್ರಶಿಕ್ಷಣ ಸಮಿತಿಯ ಸದಸ್ಯರು/ಪಿ.ಹೆಚ್.ಡಿ-ವಿದ್ಯಾವಾರಿಧಿ ವಿದ್ಯಾರ್ಥಿಗಳು ಯಾವುದೇ ಕಾಲೇಜಿನಲ್ಲಿ ವಿದ್ಯಾರ್ಥಿಗಳಾಗಿ ಪರೀಕ್ಷೆ ತೆಗೆದುಕೊಳ್ಳುವಂತಿಲ್ಲ.
2. ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕಾದ ಎಲ್ಲಾ ಪರೀಕ್ಷಾ ಸಂಬದ್ಧ ಮಾಹಿತಿಗಳನ್ನು Microsoft word, pdf, image ನಲ್ಲಿ ಕಳುಹಿಸಬಾರದು. ಕೇವಲ Microsoft excel sheet ನಲ್ಲಿ ಕಳುಹಿಸಬೇಕು. Font size- 12. Font name- Cambria (Headings). ವಿದ್ಯಾರ್ಥಿಗಳ ಮಾಹಿತಿಯನ್ನು examksu2016@gmail.com ಇ-ಮೇಲ್ ವಿಳಾಸಕ್ಕೆ ಸಕಾಲದಲ್ಲಿ ಕಳುಹಿಸುವುದು ಮತ್ತು ಪ್ರತಿಯನ್ನು (hard copy) ಕುಲಸಚಿವರು (ಮೌಲ್ಯಮಾಪನ), ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ-18 ಈ ವಿಳಾಸಕ್ಕೆ ಕಳುಹಿಸುವುದು.

ಹಾಜರಾತಿ ವಿಚಾರ :

ಪ್ರತಿ ಪತ್ರಿಕೆಯಲ್ಲಿ ಕನಿಷ್ಠ ಶೇಕಡ 75 ರಷ್ಟು ಹಾಜರಾತಿಯನ್ನು ಕಡ್ಡಾಯವಾಗಿ ವಿದ್ಯಾರ್ಥಿಗಳು ಹೊಂದಿರಬೇಕು. ವಿದ್ಯಾರ್ಥಿಗಳ ಹಾಜರಾತಿ ಪಟ್ಟಿಯಲ್ಲಿ ತರಗತಿ ಮಾಡಿದ ಅಧ್ಯಾಪಕರ ಹಸ್ತಾಕ್ಷರ ಹಾಗೂ ಮಾಸಾಂತ್ಯದಲ್ಲಿ ಪ್ರಾಂಶುಪಾಲರ/ವಿಭಾಗಾಧ್ಯಕ್ಷರ ಹಸ್ತಾಕ್ಷರವು ಕಡ್ಡಾಯವಾಗಿರುತ್ತದೆ. ಯಾವುದೇ ಸಂದರ್ಭದಲ್ಲಿಯೂ ಪರೀಕ್ಷಾಂಗವು ಹಾಜರಾತಿ ಕುರಿತಾದ ದಾಖಲೆಯನ್ನು ಕೇಳಬಹುದಾಗಿದ್ದು, ಅಂತಹ ಸಂದರ್ಭದಲ್ಲಿ ಪ್ರಾಂಶುಪಾಲರು/ವಿಭಾಗಾಧ್ಯಕ್ಷರು/ಅಧ್ಯಯನಾಂಗವು ಇದನ್ನು ದೃಢೀಕರಿಸಿ ಪರೀಕ್ಷಾಂಗಕ್ಕೆ ಸಲ್ಲಿಸಬೇಕಾಗುವುದು.

1 ಕ್ರೆಡಿಟ್ = 16 ಘಂಟೆಗಳ ಬೋಧನಾವಧಿಯಾಗಿರುತ್ತದೆ. ಆದ್ದರಿಂದ ಪ್ರತಿ ಪತ್ರಕ್ಕೆ ನಿಗದಿಪಡಿಸಿದ ಕ್ರೆಡಿಟ್ ಗೆ ಅನುಗುಣವಾಗಿ ಒಟ್ಟು ಬೋಧನಾವಧಿಯು ಪ್ರತಿ ವಿಷಯದಲ್ಲಿಯೂ ಇರತಕ್ಕದ್ದು ಹಾಗೂ ಬೋಧನೆಯು ನಡೆದಿರಬೇಕು. (ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅಗತ್ಯವಿರುವಲ್ಲಿ ಹೆಚ್ಚಿನ ತರಗತಿಗಳನ್ನು ನಡೆಸಬಹುದಾಗಿದೆ). ಪ್ರತಿ ಪತ್ರಿಕೆಯಲ್ಲಿ ಒಟ್ಟು ನಡೆದ ಬೋಧನಾವಧಿಯಲ್ಲಿ ಕನಿಷ್ಠ ಶೇಕಡ 75 ರಷ್ಟು ಹಾಜರಾತಿ ಹೊಂದಿದ ವಿದ್ಯಾರ್ಥಿಯು ಮಾತ್ರ ಪರೀಕ್ಷೆ ಬರೆಯಲು ಅರ್ಹನಾಗಿರುತ್ತಾನೆ.

| ಕ್ರೆಡಿಟ್ ಸಂಖ್ಯೆ | ಬೋಧನಾವಧಿ | ಕನಿಷ್ಠ ಹಾಜರಾತಿ ಅವಧಿ |
|---|---|---|
| 01 | 16 | 12 |
| 02 | 32 | 24 |
| 03 | 48 | 36 |
| 04 | 64 | 48 |

ಆಂತರಿಕ ಅಂಕ ವಿಚಾರ :

| ಕೋರ್ಸ್ ಮತ್ತು ಸೆಮಿಸ್ಟರ್ | ಸ್ಕೀಮ್ ನ ಹೆಸರು | C1 | C2 | C3 | ಗರಿಷ್ಠ | ಕನಿಷ್ಠ |
|---|---|---|---|---|---|---|
| BA/BSc II Sem 2024-25 Batch | KSU SEP-NEP 24-25 | 20 | NA | NA | 20 | 08 |
| BA/BSc IV & VI Sem | KSU NEP 22-23 | 20 | 20 | NA | 40 | 16 |
| MA/MSc II Sem | KSU PG 24-25 | 10 | 10 | 10 | 30 | 12 |
| MA,MSc IV Sem | KSU Non NEP 21-22 | 10 | 10 | 10 | 30 | 12 |

1) NA = Not Applicable = ಸಂಬಂಧಿಸಿರುವುದಿಲ್ಲ ಎಂದರ್ಥ.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक-संस्कृत-विश्वविद्यालयः
श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.

## SAMPLE-1

| SL. NO | REG NO | NAME OF THE STUDENTS | FATHER'S NAME | SUBJECT | I | II | III | IV | V | VI | VII |
|---|---|---|---|---|---|---|---|---|---|---|---|
| 1 | | SHRUTHI H M | MUNIYAPPA | ALANKARA | AL | AL | AL | AL | OE | SAN | KAN /ENG |
| 2 | | SHRIVANI K E | APPORAO K | ALANKARA | AL | AL | AL | AL | OE | SAN | KAN /ENG |
| 3 | | SURESH BABU | RAMASWAMY | ALANKAR A | AL | AL | AL | AL | OE | SAN | KAN/EN |
| 4 | | VINUTHA B T | THIPPESWAMY | ALANKAR A | AL | AL | AL | AL | OE | SAN | KAN/EN |

## SAMPLE-2

**FORM-02**

**KARNATAKA SAMSKRIT UNIVERSITY, CHAMARAJPETE, BAN-18**

**NAME OF THE COLLEGE & CODE:**

**NAME OF THE COURSE:**

| SL. NO | NAME OF THE STUDENTS | COURSE | FATHER'S NAME | MOTHER'S NAME | GENDER | CASTE | FEE PAID | UPI NO |
|---|---|---|---|---|---|---|---|---|
| 1 | SHRUTHI H M | BAII SEM | MUNIYAPPA | RANGAMMA | FEMALE | GEN | 450 | T21210456099 |
| 2 | SHRIVANI K E | BAII SEM | APPORAO K | VASUMATI | FEMALE | SC/ ST | 225 | T21210456099 |
| 3 | SURESH | BAII SEM | RAMASWAMY | SAVITHRI | MALE | GEN | 450 | T21210456099 |
| 4 | VINUTHA B T | BAII SEM | THIPPAYYA | GAYATRI | FEMALE | C-I | 225 | T21210456099 |

**DETAILS OF NR**

| SL. NO | CLASS | SC | | ST | | CAT-I | | OBC | | GM | | REPEATER | | TOTAL | |
|---|---|---|---|---|---|---|---|---|---|---|---|---|---|---|---|
| | | M | F | M | F | M | F | M | F | M | F | M | F | M | F |
| 1 | BA-I | 1 | 0 | 0 | 1 | 0 | 0 | 1 | 0 | 1 | 2 | 3 | 1 | 6 | 4 |
| TOTAL | | 1 | 0 | 0 | 1 | 0 | 0 | 1 | 0 | 1 | 2 | 3 | 1 | 6 | 4 |

**PRINCIPAL CONTACT NUMBER & E.MAIL ID OF COLLEGE :-**

28/4/25

2) ಸ್ಕೀಮ್‌ನ್ನು ಸರಿಯಾಗಿ ಗಮನಿಸಿ ಆಂತರಿಕ ಅಂಕಗಳನ್ನು ನೀಡಬೇಕು. ಬೇರೆ ಬೇರೆ ಸ್ಕೀಮ್ ಗಳಲ್ಲಿ ಆಂತರಿಕ ಅಂಕಗಳ ವಿಭಾಗ ಕ್ರಮ ವ್ಯತ್ಯಾಸವಿರುವುದನ್ನು ಗಮನಿಸಿಕೊಳ್ಳುವುದು.

3) ಆಂತರಿಕ ಅಂಕಗಳನ್ನು ಮ್ಯಾಪ್ ಮಾಡುವಾಗ ಗರಿಷ್ಠಾಂಕವನ್ನು ಕೋಷ್ಠಕದಲ್ಲಿ ನೀಡಿದಂತೆಯೇ ನಿಡಬೇಕು.

4) ಆಂತರಿಕ ಅಂಕಗಳು ಒಟ್ಟು ಸೇರಿದಾಗ ಕನಿಷ್ಠಾಂಕಕ್ಕಿಂತ ಕಡಿಮೆ ಬಂದಲ್ಲಿ, ಲೇಖನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದರೂ ಒಟ್ಟು ಫಲಿತಾಂಶದಲ್ಲಿ ಆ ವಿದ್ಯಾರ್ಥಿಯು ಅನುತ್ತೀರ್ಣನಾಗುತ್ತಾನೆ. ಬರವಣಿಗೆಯ ಪರೀಕ್ಷೆಯಂತೆ ಆಂತರಿಕ ಅಂಕದಲ್ಲಿಯೂ ನಿಗದಿಪಡಿಸಿದ ಕನಿಷ್ಠಾಂಕಗಳನ್ನು ಪಡೆದರೆ ಮಾತ್ರ ವಿದ್ಯಾರ್ಥಿಯು ತೇರ್ಗಡೆ ಹೊಂದುತ್ತಾನೆ.

5) ವಿಶ್ವವಿದ್ಯಾಲಯವು ಅಂತಿಮ ಫಲಿತಾಂಶವನ್ನು ಪ್ರಕಟಿಸಿದ ನಂತರ ಆಂತರಿಕ ಅಂಕಗಳನ್ನು ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.

6) ವೇದ ವಿಭಾಗದಲ್ಲಿಯೂ ಎಲ್ಲ ಪತ್ರಿಕೆಗಳಲ್ಲಿಯೂ ಬಿ.ಎ/ಶಾಸ್ತ್ರಿಯಲ್ಲಿ ದ್ವಿತೀಯ ಷಾಣ್ಮಾಸಿಕದಲ್ಲಿ 80-20 ಹಾಗೂ ಚತುರ್ಥ ಮತ್ತು ಷಷ್ಠ ಷಾಣ್ಮಾಸಿಕದಲ್ಲಿ 60-40, ಹಾಗೂ ಎಂ.ಎ ಆಚಾರ್ಯದಲ್ಲಿ 70-30 ಮಾದರಿಯಲ್ಲಿಯೇ ಅಂಕಗಳನ್ನು ನೀಡುವುದು.

7) ವೇದ ವಿದ್ಯಾರ್ಥಿಗಳಿಗೆ ಮೌಖಿಕ ಪರೀಕ್ಷೆಯೇ ಪ್ರಧಾನವಾಗಿದ್ದರಿಂದ ಆಂತರಿಕ ಅಂಕ ವಿಭಾಗದಲ್ಲಿಯೂ ಅಸೈನ್ಮೆಂಟ್/ಟೆಸ್ಟ್ ಸ್ಥಾನದಲ್ಲಿ ಮೌಖಿಕ ಪರೀಕ್ಷೆಯನ್ನೇ ನಡೆಸಿ ಅಂಕಗಳನ್ನು ನೀಡಬಹುದು, ತಾಂತ್ರಿಕ ಕಾರಣಗಳಿಗಾಗಿ ಅಸೈನ್ಮೆಂಟ್/ಟೆಸ್ಟ್ ಇತ್ಯಾದಿ ವಿಭಾಗಗಳನ್ನು ನೀಡಲಾಗಿದೆ, ಅಂಕಗಳನ್ನು ಆಯಾ ವಿಭಾಗಗಳಲ್ಲಿ ಪ್ರತ್ಯೇಕವಾಗಿ ನಮೂದಿಸುವುದು ಕಡ್ಡಾಯವಾಗಿದೆ.

8) ಎಲ್ಲ ವಿದ್ಯಾರ್ಥಿಗಳ ಆಂತರಿಕ ಅಂಕಗಳ ಕುರಿತಾದ ದಾಖಲೆಗಳನ್ನು = ಶಾಸ್ತ್ರ ವಿದ್ಯಾರ್ಥಿಗಳ ಅಸೈನ್ಮೆಂಟ್, ಟೆಸ್ಟ್ ಪೇಪರ್, ಪರೀಕ್ಷಾ ಹಾಜರಾತಿ ಪಟ್ಟಿ, ಅಧ್ಯಾಪಕರಿಂದ ದೃಢೀಕರಿಸಿದ ಅಂಕಪಟ್ಟಿ ಇತ್ಯಾದಿ ಹಾಗೂ ವೇದ ವಿದ್ಯಾರ್ಥಿಗಳ ಅಧ್ಯಾಪಕರಿಂದ ದೃಢೀಕರಿಸಿದ ಮೌಖಿಕ ಪರೀಕ್ಷೆಯ ಅಂಕಪಟ್ಟಿ, ಪರೀಕ್ಷಾ ಹಾಜರಾತಿ ಪಟ್ಟಿಗಳನ್ನು ವಿದ್ಯಾಲಯದಲ್ಲಿ ವ್ಯವಸ್ಥಿತವಾಗಿ ಸಂರಕ್ಷಿಸಿಡುವುದು ಕಡ್ಡಾಯವಾಗಿರುತ್ತದೆ.

ಆದೇಶದ ಮೇರೆಗೆ,

28/4/21

ಕುಲಸಚಿವರು (ಮೌಲ್ಯಮಾಪನ) – ಪ್ರ

Registrar (Evaluation)
Karnataka Samskrita Vishwavidyalaya
Bengaluru - 560 018.

ಪ್ರತಿಗಳು:-

1. ನಿರ್ದೇಶಕರು, ಅಧ್ಯಯನಾಂಗ, ಕ.ಸಂ.ವಿ.
2. ಎಲ್ಲಾ ವಿಭಾಗಾಧ್ಯಕ್ಷರು, ಕಸಂವಿ.
3. ಪ್ರಾಂಶುಪಾಲರು/ಸಂಯೋಜಕರು
4. ಸೂಚನಾ ಫಲಕ/ಅಂತರ್ಜಾಲಪುಟ